ಆ) ವಾಣಿಜ್ಯ ವಿಭಾಗವನ್ನು ತೆರೆಯಲು ಅಧಿಕ ಹುದ್ದೆಗಳ ಆಗತ್ಯವಿದೆ.

ಇ) ಮತ್ತು ಈ) ಈ ಸಾಧ್ಯತೆಯನ್ನು ಪರಿಶೀಲಿಸಲಾಗುವುದು.

ರಾಜಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿರುವ ಪ್ರಾಥಮಿಕ ಮಾಧ್ಯಮಿಕ, ಪ್ರೌಢಶಾಲೆಗಳು ಹಾಗೂ ಕಾಲೇಜುಗಳ ಬಗ್ಗೆ

೧೬೦೩. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರದ ಶಾಲೆಗಳು ಪ್ರಾಥಮಿಕ, ಮಾಧ್ಯಮಿಕ ಪ್ರೌಢಶಾಲೆ, ಕಾಲೇಜು ಅತಿ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸರ್ಕಾರದವರು ನಡೆಸುವ ಪ್ರಾಥಮಿಕ, ಮಾಧ್ಯಮಿಕ ಪ್ರೌಢಶಾಲೆ, ಕಾಲೇಜುಗಳ ಸಂಖ್ಯೆ ಈ ಕ್ಷೇತ್ರದಲ್ಲಿ ಎಷ್ಟು;

ಇ) ಖಾಸಗೀ ವಿದ್ಯಾಶಾಲೆಗಳು, ಪ್ರೌಢಶಾಲೆಗಳು ಮತ್ತು ಕಾಲೇಜುಗಳು ಈ ಕ್ಷೇತ್ರದಲ್ಲಿವೆ;

ಈ) ಖಾಸಗಿ ವಿದ್ಯಾಸಂಸ್ಥೆಗಳವರು ಬಡವರನ್ನು ಪೋಷಕರನ್ನು ವಿದ್ಯಾರ್ಥಿಗಳನ್ನು ದುಬಾರಿ ಶುಲ್ಕ ಮತ್ತು ದಂತಿಗೆಗಳ ವಸೂಲಾತಿ ಮೂಲಕ ಶೋಷಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಉ) ಹಾಗಿದ್ದಲ್ಲಿ ಶೋಷಣೆ ತಪ್ಪಿಸಲು ಸರ್ಕಾರದವರಂ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಲು ಕಾರ್ಯಕ್ರಮಗಳನ್ನು ರೂಪಿಸಿದ್ದಾರೆಯೆ. ಹಾಗಿದ್ದಲ್ಲಿ ಅವರ ವಿವರಗಳೇನು?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು)

ಅ) ಬಂದಿದೆ.

ಆ) ೧) ಪ್ರಾಥಮಿಕ ಶಾಲೆಗಳು —೪

೨) ಮಾಧ್ಯಮಿಕ ಶಾಲೆಗಳು —೬

೩) ಸೆಕೆಂಡರಿ ಶಾಲೆಗಳಂ —೮

೪) ಜೂ. ಕಾಲೇಜುಗಳು —೧

೫) ಪ್ರಥಮದರ್ಜೆ ಕಾಲೇಜು —ಇಲ್ಲ

ಇ) ೧) ಪ್ರಾಥಮಿಕ ಮತ್ತು ಮಾಧ್ಯಮಿಕ —೩೫

೨) ಸೆಕೆಂಡರಿ ಶಾಲೆಗಳು —೨೪

೩) ಕಿರಿಯ ಕಾಲೇಜು — ೨

೪) ಪ್ರಥಮದರ್ಜೆ ಕಾಲೇಜು — ೪

ಈ) ರಾಜ್ಯದಲ್ಲಿ ಅನೇಕ ಖಾಸಗಿ ಶಿಕ್ಷಣಸಂಸ್ಥೆಗಳು ದುಬಾರಿ ದರದಲ್ಲಿ ಶುಲ್ಕ ಹಾಗೂ ದಂತಿಗೆ ಸಂಗ್ರಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಉ) ಸರ್ಕಾರಿ ವಿದ್ಯಾಸಂಸ್ಥೆಗಳಿಗೆ ಬೇಡಿಕೆ ಬಂದಲ್ಲಿ ಅದನ್ನು ನಿಯಮಾನುಸಾರ ಪರಿಶೀಲಿಸಲಾಗುವುದು.